ಓ ಎಸ್ ನಂಃ 220-15
ಪಿ ಡಬ್ಲ್ಯೂ ಃ 1

ದಿಃ 09-12-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ

ಯಶವಂತಪುರದಲ್ಲಿರುವ ಆಸ್ತಿ ಮೂಲತಃ 4ನೇ ಪ್ರತಿವಾದಿಯವರ ಹೆಸರಿನಲ್ಲಿತ್ತು ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಾಯಿಯ ತಂದೆ 4ನೇ ಪ್ರತಿವಾದಿಗೆ ಆಸ್ತಿಯನ್ನು ಖರೀದಿ ಮಾಡಲು ಹಣ ಕೊಟ್ಟಿದ್ದು ಅವರು ಬಾಣಂತನಕ್ಕೆ ಹೋದಾಗ ನನ್ನ ತಂದೆಯವರು ಆ ಹಣದಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ನನ್ನ ತಾಯಿಯ ತಂದೆಯ ಹಣದಿಂದ ಖರೀದಿ ಮಾಡಿದ ಆಸ್ತಿಯನ್ನು ವಾಪಸ್ಸು ಕೊಡುವಂತೆ ನಾವು ಕೇಳಿದ್ದು, ಜಿ ಪಿ ಎ ಮಾಡಿ ಕೊಟ್ಟಿರುತ್ತೇನೆಂದು ನಮಗೆ ತಿಳಿಸಿರುತ್ತಾರೆ. 1995-96ನೇ ಇಸವಿಯಿಂದ ನನ್ನ ತಂದೆ ಹಾಗೂ ತಾಯಿಯ ಮದ್ಯೆ ವಿರಸ ಇದ್ದು, ಅವರಿಬ್ಬರು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದಾರೆ. 1996ರಲ್ಲಿ ನನ್ನ ತಾಯಿ ನಮ್ಮನ್ನೆಲ್ಲಾ ಪಕ್ಷಗಾರರನ್ನಾಗಿ ಮಾಡಿ ನನ್ನ ತಂದೆಯ ವಿರುದ್ಧ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದ್ದರೂ ಎಂದರೆ ಅಂದಾಜು 1996 ಎರಡು ವರ್ಷ ಹಿಂದೆ ಮುಂದೆ ಸಮಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದು ಹೇಳುತ್ತಾರೆ. ಆ ಜೀವನಾಂಶ ಅರ್ಜಿಯ ನಂ.384/1996 ಆಗಿದ್ದು ಅದನ್ನು 1996ರಲ್ಲಿ ಸಲ್ಲಿಸಿದ್ದರು ಎಂದರೆ ಅಂದಾಜು 1996 ರಲ್ಲಿ ಸಲ್ಲಿಸಿದ್ದು ಅರ್ಜಿಯ ನಂಬರ್ ನೆನಪಿಲ್ಲ ಎಂದು ಹೇಳುತ್ತಾರೆ. 1995-96 ರಿಂದ ನನ್ನ ತಂದೆ ಮತ್ತು ತಾಯಿಯ ಮದ್ಯೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಗಳು 1995-96 ರಿಂದ ನನ್ನ ತಾಯಿಯ ಜೊತೆ ವಾಸ ಮಾಡುತ್ತಿದ್ದೇವೆ ಎಂದರೆ ನಿಜ.

ನನ್ನ ತಾಯಿ ಸಲ್ಲಿಸಿದ ಜೀವನಾಂಶದ ಅರ್ಜಿ ಏನು ಆಗಿರುತ್ತದೆ ತಿಳಿದುಕೊಂಡಿಲ್ಲ. ನಾನು ವಯಸ್ಕನಾದ ನಂತರ ಮತ್ತು ಈ ದಾವೆ ಹೂಡಿದ ನಂತರ ಅಥವಾ ಮೊದಲು ಜೀವನಾಂಶ ಅರ್ಜಿಯ ಬಗ್ಗೆ ತಿಳಿದುಕೊಂಡಿಲ್ಲ, ನಾನು ಈ ವಿಚಾರವಾಗಿ ನನ್ನ ತಾಯಿಯನ್ನು ಕೇಳಿದ್ದು ಅವರು ಆ ಅರ್ಜಿ ಅಲ್ಲಿಯೇ ನಿಂತಿರುತ್ತದೆ ಎಂದು ನನಗೆ ಹೇಳಿರುತ್ತಾರೆ. ನಂತರ ನಾನು ಆ ಅರ್ಜಿಯ ಬಗ್ಗೆ ಪರಿಶೀಲನೆ ಮಾಡಲು ಪ್ರಯತ್ನಪಟ್ಟಿಲ್ಲ.

ನನ್ನ ತಾಯಿ ಸಲ್ಲಿಸಿದ ಜೀವನಾಂಶದ ಅರ್ಜಿ ವಜಾ ಆಗಿದ್ದು, ಆ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಅರ್ಜಿಯಲ್ಲಿ  ಯಶವಂತಪುರದಲ್ಲಿರುವ ಆಸ್ತಿಯಲ್ಲಿ ಅವರೇ ಸ್ವಾಧೀನತೆಯಲ್ಲಿದ್ದು ಬಾಡಿಗೆಯನ್ನು ಅವರೇ ಪಡೆದುಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಯಶವಂತಪುರದಲ್ಲಿರುವ ಆಸ್ತಿಯಲ್ಲಿ ನಾವೇ ಸ್ವಾಧೀನತೆ

ಹೊಂದಿರುತ್ತೇವೆ ಎಂದು ಹೇಳುತ್ತಾರೆ. ಜಾರಕಬಂಡೆ ಕಾವಲ್‌ದಲ್ಲಿರುವ ಆಸ್ತಿಯ ಸ್ವಾಧೀನತೆಯನ್ನು ನಾವು ಹೊಂದಿಲ್ಲ ಆ ಆಸ್ತಿಯನ್ನು ನನ್ನ ತಂದೆ ತಾಯಿ ಇಬ್ಬರೂ ಸೇರಿ ಮಾರಾಟ ಮಾಡಿರುತ್ತಾರೆ. ಜಾರಕಬಂಡೆ ಕಾವಲ್‌ನಲ್ಲಿರುವ ಆಸ್ತಿಯನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಗೊತ್ತಿಲ್ಲ. ಆ ಆಸ್ತಿಯನ್ನು 2004-05 ನೇ ಇಸವಿಯಲ್ಲಿ ಮಾರಾಟ ಮಾಡಿರಬಹುದು. ಜಾರಕಬಂಡೆ ಕಾವಲ್‌ದಲ್ಲಿರುವ ಆಸ್ತಿ ಯಾರ ಹೆಸರಿನಲ್ಲಿದೆ ಎಂಬುದರ ಬಗ್ಗೆ ದಾಖಲೆ ನೋಡಿಲ್ಲ.

ಜೀವನಾಂಶದ ಅರ್ಜಿ ವಜಾ ಆದ ನಂತರ ಪಂಚಾಯ್ತಿಯಲ್ಲಿ ನನ್ನ ತಂದೆ, ನನ್ನ ತಾಯಿ ಹಾಗೂ ನಮಗೆ ಯಶವಂತಪುರ ಹಾಗೂ ಜಾರಕಬಂಡೆ ಕಾವಲ್ ದಲ್ಲಿರುವ ಆಸ್ತಿಗಳನ್ನು ಜೀವನಾಂಶಕ್ಕಾಗಿ ಹಾಗೂ ಭಾಗದ ರೂಪದಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಯಶವಂತಪುರದಲ್ಲಿರುವ ಆಸ್ತಿಯನ್ನು ನನ್ನ ತಾಯಿ ಯಾರಿಗೆ ಮಾರಾಟ ಮಾಡಿರುತ್ತಾರೆ ಪರಿಶೀಲನೆ ಮಾಡಿಲ್ಲ.

ಮುಂದುವರೆದ ಪಾಟೀ ಸವಾಲುಃ ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**